www.ecourtsindia.com



**24ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು**

**ಸಿ.ಸಿ.ನಂ.12058/2021**

**ಪ್ರಾ.ಸಾಃ 1 ಚಾ.ಸಾಃ 1**

| | |
|---|---|
| **ಸಾಕ್ಷಿದಾರರ ಹೆಸರು** | ಲತಾ |
| **ತಂದೆಯ ಹೆಸರು** | ರಾಜು |
| **ವಯಸ್ಸು** | 28 ವರ್ಷ |
| **ಉದ್ಯೋಗ** | ಮನೆ ಕೆಲಸ |
| **ವಿಳಾಸ** | ಶ್ರೀನಗರ , ಬೆಂಗಳೂರು |

**ದಿನಾಂಕ ಃ 29.09.2022. ರಂದು ಸಾಕ್ಷಿಗೆ ಶಪಥ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಹಿ.ಸ.ಸ.ಅ.ಃ**

ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. 3 ರಿಂದ 5 ನೇ ಆರೋಪಿತರು ನಮ್ಮ ಪಕ್ಕದ ವಾಸಿಗಳು . ಚಾಸಾ.2 ನನ್ನ ಅಣ್ಣ. ನಮ್ಮ ಮನೆಯ ಪಕ್ಕದಲ್ಲಿ ಆರೋಪಿತರು ಕ್ರಿಕೇಟ್ ಆಡುವ ವಿಚಾರವಾಗಿ ನಾನು ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದೆ. ಇದೇ ವಿಚಾರವಾಗಿ ದಿ.16.11.2020 ರಂದು ರಾತ್ರಿ 8.30 ರ ಸುಮಾರಿಗೆ ನಾನು ಮನೆಯಲ್ಲಿದ್ದಾಗ ನಾನು ಮತ್ತು ನನ್ನ ಅಣ್ಣ ಮನೆಯಲ್ಲಿದ್ದಾಗ ಆರೋಪಿತರು ಮನೆಗೆ ಬಂದು ಏಕಾಏಕಿ 3 ರಿಂದ 5 ನೇ ಆರೋಪಿತರು ಜಗಳಕ್ಕೆ ಬಂದರು , 1 ಮತ್ತು 2 ನೇ ಆರೋಪಿತರು ಚಾಸಾ.2 ರವರಿಗೆ ಕೈಯಿಂದ ಹಲ್ಲೆ ಮಾಡಿರುತ್ತಾರೆ. ಆರೋಪಿತರು ಕೆಟ್ಟ-ಕೆಟ್ಟ ಮಾತುಗಳಿಂದ ಬೈದು , ನೀವು ಕೀಳು ಜಾತಿಯವರು ಇಲ್ಲಿ ಇರಬಾರದು ಮನೆಯನ್ನು ಮಾರಾಟ ಮಾಡಿಕೊಂಡು ಹೋಗಿ ಇಲ್ಲದಿದ್ದರೆ ನಿಮ್ಮ ಪ್ರಾಣ ತೆಗೆಯುತ್ತೇವೆಂದು ಹೇಳಿ ಕೆಟ್ಟ ಕೆಟ್ಟ ಮಾತುಗಳಿಂದ ಬೈದರು. ನಾನು ಬೀದಿ ರಸ್ತೆಯಲ್ಲಿ ಓಡಾಡುತ್ತಿರುವಾಗ 1 ರಿಂದ 5 ನೇ

This is a True Copy of the Court Records Online. Authenticated @ districts.ecourtsindia.com/cnr/KABC030337442021/truecopy/order-1.pdf

P.W.1

ಆರೋಪಿತರು ನನ್ನ ದೇಹದ ಅಂಗಾಂಗಳ ಬಗ್ಗೆ ಕೆಟ್ಟದಾಗಿ ಹೇಳುತ್ತಾ ನನಗೆ ಅವಮಾನ ಮಾಡುತ್ತಿದ್ದರು. ಆರೋಪಿತರು ನನ್ನ ಅಣ್ಣನಿಗೆ ಹಲ್ಲೆ ಮಾಡಿದ್ದರಿಂದ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಆದರೆ ಪೊಲೀಸರು ದೂರು ತೆಗೆದುಕೊಳ್ಳಲಿಲ್ಲ. ನಾನು ನನ್ನ ಅಣ್ಣನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ಪುನಃ 19 ನೇ ತಾರೀಖು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು ಅದನ್ನು **ನಿ.ಪಿ.1** ಎಂದು ಸಾಕ್ಷಿಯ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. ದೂರು ನೀಡಿದ ನಂತರ ಪೋಲೀಸರು ನಮ್ಮ ಮನೆ ಹತ್ತಿರ ಬಂದು ಚಾಸಾ.3 ಮತ್ತು 4 ರವರ ಮೂಲಕ ಪಂಚನಾಮೆ ಮಾಡಿರುತ್ತಾರೆ , ಸದರಿ ಪಂಚನಾಮೆ ನೋಡುತ್ತಿದ್ದು ಅದನ್ನು **ನಿ.ಪಿ.2** ಎಂದು ಸಾಕ್ಷಿಯ ಸಹಿಯನ್ನು **ನಿ.ಪಿ.2(ಎ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಪಾಟೀ ಸವಾಲು ಮಾಡಲು ಆರೋಪಿತರ ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮ್ಡಾಡಲಾಗಿದೆ)

**ಓ.ಹೇ.ಕೇ.ಸ.ಇ.ಒ**

**24ನೇ ಅ.ಮು.ಮು.ದಂ.ನ್ಯಾ.**

This is a True Copy of the Court Records Online. Authenticated @ districts.ecourtsindia.com/cnr/KABC030337442021/truecopy/order-1.pdf